

ಗುಡ್ಡಗಳಿಗೆ ನಿಮೋಫಿಲಾ ಹೊದಿಕೆ

ಸಂಪೂರ್ಣವಾಗಿ ಆವರಿಸುವಂತೆ ಒತ್ತೊತ್ತಾಗಿ ಬೆಳೆಸಿದ ವಿವಿಧ ಪ್ರಭೇದದ 3000 ಅರ್ಝೀಲಿಯ ಪೊದೆಗಳು ಬಿಳಿ, ಗುಲಾಬಿ, ಕಿತ್ತಳೆ, ನೇರಳೆ, ಕೆಂಪು ಬಣ್ಣದ ಹೂಗಳಿಂದ ರಾರಾಜಿಸುತ್ತಿದ್ದವು. ಹೂಗಳು ಆಕಾರ, ಗಾತ್ರದಲ್ಲೂ ವೈವಿಧ್ಯಮಯವಾಗಿದ್ದವು. ಇಲ್ಲಿಯೂ ಏಪ್ರಿಲ್–ಮೇ ತಿಂಗಳುಗಳಲ್ಲಿ ‘ಅರ್ಝೀಲಿಯ ಹಬ್ಬ’.

## ನಿಮೋಫಿಲಾ ಹೂ ಹೊದಿಕೆ

ಟೋಕಿಯೊ ಮಹಾನಗರದಿಂದ ಒಂದೂವರೆ ಗಂಟೆಯ ಕಾರು ಪ್ರಯಾಣ ಮಾಡಿದಾಗ ಹಿಟಾಚಿನಾಕ, ಇಬರಾಕಿಯ ಹಿಟಾಚಿ ಸೀ ಸೈಡ್ ಪಾರ್ಕ್ ತಲುಪಿದೆವು. ಸಮುದ್ರ ಕಿನಾರೆಯ ಅನುಪಮ ಶೋಭೆಯ ಉದ್ಯಾನ. ಸನಿಹದಲ್ಲೇ ಮಿಹರಾಶಿ ಹೆಸರಿನ ಗುಡ್ಡಗಳು. ಉದ್ಯಾನ ಸುತ್ತಾಡಿ ಗುಡ್ಡಗಳ ಸನಿಹ ಬಂದಾಗ ಕಂಡದ್ದು, ಹತ್ತು ಹದಿನೈದು ಎಕರೆ ವಿಸ್ತೀರ್ಣದ ಬೋಳುಗುಡ್ಡಗಳಿಗೆ ನೀಲಿಬಣ್ಣದ ಹೊದಿಕೆ. 53 ಲಕ್ಷ ಗಿಡಗಳು ಏಕಕಾಲಕ್ಕೆ ಒಂದೇ ಗಾತ್ರಕ್ಕೆ ಬೆಳೆದು ಎಲ್ಲವೂ ಒಟ್ಟಿಗೆ ಹೂ ಬಿಟ್ಟಿವೆ. ಗುಡ್ಡದ ತುದಿಯವರೆಗೆ ಹೋಗಲು ಕಾಲುದಾರಿ ಬಿಟ್ಟರೆ ಉಳಿದೆಲ್ಲ ಜಾಗಗಳು ನಿಮೋಫಿಲಾ ಗಿಡಗಳ ನೀಲಿ ಹೂವಿನಿಂದಾವೃತ.

ನಿಮೋಫಿಲಾ ಏಕವಾರ್ಷಿಕ ಗಿಡ. ಎತ್ತರ 20 ಸೆ.ಮೀ., ಹೂಗಳು 2ರಿಂದ 3 ಸೆ.ಮೀ. ಗಾತ್ರದವು. ಹೂ ಬಣ್ಣ ಕಡುನೀಲಿ. ಇಲ್ಲಿ ಪ್ರತಿವರ್ಷ ನವೆಂಬರ್ ತಿಂಗಳು ಗುಡ್ಡಗಳ ನೆಲವನ್ನು ಸ್ವಚ್ಛಗೊಳಿಸಿ ಮಣ್ಣನ್ನು ಹದಗೊಳಿಸಿ ನಿಮೋಫಿಲಾ ಬೀಜಗಳನ್ನು ಬಿತ್ತುತ್ತಾರೆ. ಚಳಿಗಾಲದ ಹಿಮಗಡ್ಡೆಗಳಿಂದ ರಕ್ಷಣೆಗಾಗಿ ಬಿಳಿ ಶೀಟ್‌ಗಳಿಂದ ಮುಚ್ಚುತ್ತಾರೆ. ವಸಂತ ಕಾಲ ಬಂದಂತೆ ಶೀಟ್‌ಗಳನ್ನು ಸರಿಸಿ ನೀರುಣಿಸಿದಾಗ ಏಪ್ರಿಲ್ ಬಂದು ಗಿಡಗಳೆಲ್ಲ ಬೆಳೆದು ಹೂ ಬಿಟ್ಟು, ಗುಡ್ಡಗಳು ನೀಲಿ ಬಣ್ಣದಿಂದ ಮುಚ್ಚಿ ಹೋಗುತ್ತವೆ. ಗುಡ್ಡದ ಬುಡದಿಂದ ಕತ್ತೆತ್ತಿ ನೋಡಿದಾಗ ಆಕಾಶ, ಹೂವಿಂದ ಮುಚ್ಚಿದ ಗುಡ್ಡಗಳು ಒಂದೇ ಆಗಿ ಕಾಣುತ್ತಿದ್ದವು. ಗುಡ್ಡ ತುದಿ ಏರಿದಾಗ ಕಂಡುದು ಮೂರು ನೀಲಿ ಬಣ್ಣಗಳ ಅಪೂರ್ವ ಸಮಾಗಮ. ಮೇಲೆ ಆಕಾಶದ ನೀಲಿ, ಕೆಳಗೆ ಸಮುದ್ರದ ನೀಲಿ, ನಿಂತ ಗುಡ್ಡದಲ್ಲಿ ಹೂಗಳ ನೀಲಿ. ಏಪ್ರಿಲ್ ಕೊನೆಯ ಎರಡು ವಾರ ಮಾತ್ರ ಈ ಸಂಭ್ರಮ.

ಮೇ ತಿಂಗಳು ಬಂದಾಗ ಹೂಗಳೆಲ್ಲ ಬಾಡಿ ನೀಲಿ ಹೊದಿಕೆ ಕಣ್ಮರೆಯಾಗುತ್ತದೆ. ನಾವು ಹೋಗಿದ್ದು ಏಪ್ರಿಲ್ ಕೊನೆಯ ದಿನಗಳಾದುದರಿಂದ ಹೂಗಳು ಕಳೆಗುಂದಿದ್ದರೂ ಸೌಂದರ್ಯಕ್ಕೇನೂ ಕೊರತೆಯಿರಲಿಲ್ಲ.

## ವಿಸ್ಟೇರಿಯಾ ಹೂ ಮಂಟಪಗಳು

ನಾವು ಸಂದರ್ಶಿಸಿದ ಜಪಾನಿನ ಮೂರನೇ ಉದ್ಯಾನ ಆಶಿಕಾಗ ಫ್ಲವರ್ ಪಾರ್ಕ್. ಇದು ಜಪಾನಿನ ಅತಿ ದೊಡ್ಡ ವಿಸ್ಟೇರಿಯಾ ಉದ್ಯಾನ. ಟೋಕಿಯೊದಿಂದ 90 ನಿಮಿಷಗಳ ಕಾರಿನ ಪ್ರಯಾಣದ ನಂತರ ಉದ್ಯಾನ ತಲುಪಿದಾಗ ಸುತ್ತಮುತ್ತಲಿನ ಹತ್ತಾರು ಗದ್ದೆಗಳೆಲ್ಲ ಕಾರು ಪಾರ್ಕ್‌ಗಳಾಗಿ ಮಾರ್ಪಾಟಾಗಿದ್ದವು.

ಈ ಉದ್ಯಾನದ ವಿಸ್ತಾರ 94000 ಚ.ಮೀ. ಉದ್ಯಾನ ಪ್ರವೇಶಿಸುತ್ತಿದ್ದಂತೆ ಅಪರಿಮಿತ ಜಾತಿ ಪ್ರಭೇದಗಳ ಸಸ್ಯಗಳು ವಿವಿಧ ವರ್ಣಗಳ ಹೂಗಳಿಂದ ನಳನಳಿಸುತ್ತಿದ್ದವು. ಎಲ್ಲವುಗಳಿಗೆ ಶಿಖರಪ್ರಾಯವಾಗಿ ವಿಸ್ಟೇರಿಯಾ ಗಮನಸೆಳೆಯುತ್ತಿತ್ತು. ಹೂ ಬಿಟ್ಟಾಗ ವಿಸ್ಟೇರಿಯಾ ಅನನ್ಯ ಶೋಭೆಯ ಗಿಡ. ಇದು ಮರದ ಗಾತ್ರದ ಕಾಂಡವುಳ್ಳ ಏರುಬಳ್ಳಿ. ಸ್ಟೀಲ್ ಕಂಬ–ಕಂಬಿಗಳಿಂದ ರಚಿಸಿದ ವಿವಿಧ ವಿನ್ಯಾಸ–ಗಾತ್ರದ ಚಪ್ಪರ, ಕಮಾನುಗಳಲ್ಲಿ ವಿಸ್ಟೇರಿಯಾ ಕಾಂಡಗಳನ್ನು ಬೇಕಾದಂತೆ ಬಗ್ಗಿಸಿ, ತಿರುಚಿ, ತೀಡಿಸಿ ಎತ್ತರದಲ್ಲಿ ಹಬ್ಬುವಂತೆ ಮಾಡಲಾಗಿದೆ. ಉದ್ಯಾನದ ಉದ್ದಗಲಕ್ಕೂ ಅಲ್ಲಲ್ಲಿ ವಿಸ್ಟೇರಿಯಾ ಚಪ್ಪರಗಳು, ಕಮಾನುಗಳು, ಪ್ಯಾರಾಬೋಲಾಗಳು.

ಏಪ್ರಿಲ್ ತಿಂಗಳು ಬಂದಂತೆ ಕಾಂಡಗಳಿಂದ ಎರಡು ಮೀಟರ್ ಉದ್ದದ ವರ್ಣರಂಜಿತ ಸಮೃದ್ಧ ಪುಷ್ಪಮಂಜರಿಯ ಮಾಲೆಗಳು ಮಳೆಗರೆಯುವಂತೆ ನೇತಾಡುತ್ತಿದ್ದವು. ನೂರು ಇನ್ನೂರು ಉದ್ದದ ಕಮಾನುಗಳ ಅಡಿಯಲ್ಲಿ ನಡೆಯುತ್ತಿದ್ದಂತೆ ತಲೆ ಮೇಲೆ ಹಲವಾರು ಅಲಂಕಾರಿಕ ತಳಿಗಳ ಹೂಗಳ ತೋರಣ ಮಾಲೆ ಬಿಳಿ, ನೀಲಿ, ನೇರಳೆ, ಗುಲಾಬಿ, ಹಳದಿ ಬಣ್ಣದ ಹೂಗಳಿಂದ ಕಂಗೊಳಿಸುತ್ತಿದ್ದವು.

ಬಳ್ಳಿಗಳನ್ನು ವೈವಿಧ್ಯಮಯ ವಿನ್ಯಾಸದಲ್ಲಿ ಪಳಗಿಸಿ ಬೆಳೆಸಿದ ಕೆಲಸ ಅಪೂರ್ವವಾಗಿತ್ತು. ವ್ಯಾಪಕವಾದ ಆಧಾರಗಳಿಂದ ಬೆಳೆಸಿದ ಮೂರು ಮರಗಳು 1000 ಚ.ಮೀ. ವಿಸ್ತಾರಕ್ಕೆ ಹಬ್ಬಿದ್ದವು. 150 ವರುಷ ಹಳೆಯ ಒಂದು ಮರ 1990 ಚ.ಮೀ. ಹಬ್ಬಿತ್ತು. ಈ ಎಲ್ಲಾ ಉದ್ಯಾನಗಳಲ್ಲೂ ಸಸ್ಯಗಳ ವಿವಿಧ ಪ್ರಕಾರಗಳಾದ ಮರ, ಪೊದೆ, ಚಿಕ್ಕಗಿಡ, ಬಳ್ಳಿಗಳ ಪುಷ್ಪ ವಿಲಾಸವು ವೀಕ್ಷಣೆಗಾಗಿ ಸೇರುತ್ತಿದ್ದ ಜನಸಂದಣಿಯನ್ನು ದಿಗ್ಭ್ರಮೆಗೊಳಿಸುತ್ತಿತ್ತು.

ಪ್ರತಿಕ್ರಿಯಿಸಿ: feedback@sudha.co.in